ಓ ಎಸ್ ನಂಃ31/2015

ಪಿ. ಡಬ್ಲ್ಯೂ ಃ 1

ದಿಃ 04.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 9 ಮತ್ತು 10 ರವರ ಪರ ಶ್ರೀ ಬಿ ಟಿ ಐ ವಕೀಲರಿಂದ ಃ

ನನ್ನ ಅಣ್ಣಂದಿರೆಲ್ಲ ಜಟ್ಟಿಪಾಳ್ಯದಲ್ಲಿ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದಾರೆ. ಅವರು ಬೇರೆ ಬೇರೆ ವಾಸವಾಗಿದ್ದು 10 ರಿಂದ 15 ವರ್ಷಗಳಾಗಿವೆ. 3 ಜನ ಬೇರೆ ಬೇರೆಯಾಗಿ ವಾಸಿಸುತ್ತಿರುವ ಮನೆಗಳು ನಮ್ಮ ತಂದೆ ರಾಮಯ್ಯ ಇವರ ಹೆಸರಿನಲ್ಲಿವೆ. ಆ ಮನೆಗಳ ದಾಖಲೆಗಳನ್ನು ನಾನು ತೆಗೆದುಕೊಂಡಿಲ್ಲ. ವಾಸದ ಮನೆಗಳಲ್ಲಿ ನಾನು ಭಾಗ ಕೇಳಿಲ್ಲ. ಈ ದಾವೆಯಲ್ಲಿ ಮನೆಗಳನ್ನು ಸೇರಿಸಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ 6 ಎಕರೆ ಜಮೀನಿತ್ತು. ಅದನ್ನು ದಾವೆ ಹಾಕಿದ ನಂತರ ನಮ್ಮ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದಾರೆ. ಯಾವಾಗ ಭಾಗ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಒಟ್ಟು ಎಷ್ಟು ಜಮೀನುಗಳಿದ್ದವು ಎಂದು ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪ ಗೋವಿಂದಪ್ಪ ಮತ್ತು ದೊಡ್ಡಪ್ಪ ನಾರಾಯಣಪ್ಪ ಇವರು ನಮ್ಮ ತಂದೆಗೆ ಜಮೀನಿದ್ದ ಬಗ್ಗೆ ಹೇಳಿದ್ದರು. ಹಾಗಾಗಿ ನಮಗೆ ಗೊತ್ತಾಯಿತು ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಂದೆಗೆ ಸ.ನಂ. 38 ರಲ್ಲಿ ಜಮೀನು ಇದ್ದದ್ದು ನನಗೆ ಗೊತ್ತಿಲ್ಲ. ನನ್ನ ಅಣ್ಣ ತಮ್ಮಂದಿರು ಮಾಡಿಕೊಂಡ ಭಾಗಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಅಣ್ಣ ತಮ್ಮಂದಿರು 2004 ರಲ್ಲಿಯೇ ಭಾಗ ಮಾಡಿಕೊಂಡಿದ್ದಾರೆ ಎಂದು ದಾವೆ ಹಾಕುವ ಸಮಯದಲ್ಲಿ ಗೊತ್ತಾಯಿತು. ಎಂ ಆರ್ 9/2004-05 ಇದರ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಅಣ್ಣ ತಮ್ಮಂದಿರು ಯಾವ ದಾಖಲೆಯ ಆಧಾರದ ಮೇಲೆ ಖಾತೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 4 ನೆ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟ ವಿಷಯ ನನಗೆ ಗೊತ್ತಾದ ನಂತರ ನನ್ನ ಗಂಡನ ಮೂಖಾಂತರ ಅದನ್ನು ತರಿಸಿಕೊಂಡಿದ್ದೇನೆ. ಅದನ್ನು ನಮ್ಮ ಲಾಯರ್ ಮುಖಾಂತರ ಓದಿಸಿ ತಿಳಿದುಕೊಂಡಿದ್ದೇನೆ. ನಿ ಪಿ 8 ರಲ್ಲಿ ಸಿ ಷೆಡ್ಯೂಲ್ ಸ್ವತ್ತು 2002 ರಲ್ಲಿ ಕುಟುಂಬದಲ್ಲಿ ಆದ ಭಾಗದ ಪ್ರಕಾರ ನನಗೆ ಬಂದಿತ್ತು ಎಂದು ನಮ್ಮ ಅಣ್ಣ ಕೆಂಚರಾಮಯ್ಯ ಬರೆಸಿರುವ ವಿಚಾರ ನನಗೆ ಗೊತ್ತಿಲ್ಲ.

ಎಂ ಆರ್ 28/2004-05 ರಂತೆ ಖಾತೆಯಾಗಿದೆ ಎಂದು ಹೇಳಿದ್ದನ್ನು ದಾಖಲೆ ತೆಗೆಸಿ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ದಾಖಲೆಗಳನ್ನು ದಾವೆ ಹಾಕಲು ನನ್ನ ಗಂಡ ಮತ್ತು

ಬೇರೆಯವರು ಸಹಾಯ ಮಾಡಿದ್ದಾರೆ. ನನ್ನ ಅಣ್ಣ ತಮ್ಮಂದಿರು 2002 ಕ್ಕಿಂತ ಹಿಂದೆಯೇ ಭಾಗ ಆಗಿ 2002 ರಲ್ಲಿ ಪಂಚಾಯಿತಿ ಪಾರಿಕತ್ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಣ್ಣ ಮಾಡಿಕೊಂಡ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ. 2002 ಕ್ಕಿಂತ ಮೊದಲೇ ನಮ್ಮ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಿದ್ದು ನನಗೆ ಗೊತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೆ ಭಾಗ ಇಲ್ಲದೆ ಇದ್ದರೂ ಸಹ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 6 ರಲ್ಲಿ ಇರುವ ಸ್ವತ್ತುಗಳಲ್ಲಿ ನಮಗೆ ಭಾಗ ಬರಬೇಕೆಂದು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳಲ್ಲಿ ನನಗೆ ಭಾಗ ಇಲ್ಲ ಎಂದು ನನಗೆ ಗೊತ್ತಿದ್ದರೂ ಕ್ರಯಕ್ಕೆ ತೆಗೆದುಕೊಂಡವವರಿಗೆ ತೊಂದರೆ ಕೊಟ್ಟು ಅವರಿಂದ ಹಣ ತೆಗೆದುಕೊಳ್ಳಬೇಕೆಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಬಿ ಟಿ ಆರ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**